అ.ದಾ. 60/2023 ಪಿಡಬ್ಲ್ಯೂ-1

ದಿನಾಂಕಃ 23.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀಮತಿ.ಎನ್.ಎಂ.ಸಿ.ವಕೀಲರಿಂದ:**

1. ನನ್ನ ತಂದೆಯ ಹೆಸರು ಕುಕ್ರಪ್ಪ ಎಂದರೆ ಸರಿ. ನನ್ನ ತಂದೆಗೆ ಮೂರು ಜನ ಮಕ್ಕಳು. ಅದರಲ್ಲಿ ಒಬ್ಬರು ಮೃತರಾಗಿರುತ್ತಾರೆ. ಇನ್ನೊಬ್ಬರು ಜೀವಂತ ಇರುತ್ತಾರೆ. ನಾನು ಯಡೂರು ಗ್ರಾಮದಲ್ಲಿ ಹುಟ್ಟಿ ಬೆಳದಿರುತ್ತೇನೆ. ನನ್ನ ತಂದೆ ಕರ್ನಲ್ ಮಾದಪ್ಪ ಅವರ ಕಾಫೀ ಎಸ್ಟೇಟ್ ನ ಲೈನ್ ಮನೆಯಲ್ಲಿ ಕುಟುಂಬ ಸಮೇತ ವಾಸವಿದ್ದರು ಎಂದರೆ ಸರಿ. ನನ್ನ ತಂದೆ ಕರ್ನಲ್ ಮಾದಪ್ಪ ರವರ ಕಾಫೀ ಎಸ್ಟೇಟ್ ನಲ್ಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಅವಿದ್ಯಾವಂತರು ಆಗಿದ್ದರು ಎಂದರೆ ಸರಿ. ನನ್ನ ತಂದೆ ಕರ್ನಲ್ ಮಾದಪ್ಪ ರವರ ಕಾಫೀ ಎಸ್ಟೇಟ್ ನಲ್ಲಿ ಹೊರತುಪಡಿಸಿ, ಬೇರೆ ಯಾವುದೇ ಎಸ್ಟೇಟ್ ನಲ್ಲಿ ಕೆಲಸಕ್ಕೆ ಹೋಗಿರುವುದಿಲ್ಲ ಎಂದರೆ ಸರಿ. ಕರ್ನಲ್ ಮಾದಪ್ಪ ರವರಿಗೆ ನೂರಾರು ಎಕರೆ ಕಾಫಿ ಎಸ್ಟೇಟ್ ಇರುತ್ತದೆ ಎಂದರೆ ಸರಿ. ಸದರಿಯವರ ಎಸ್ಟೇಟ್ ನಲ್ಲಿ ನೂರಾರು ಕಾರ್ಮಿಕರುಗಳು ಕೆಲಸಕ್ಕೆ ಇರುತ್ತಾರೆ ಎಂದರೆ ಸರಿ.

2. ಕರ್ನಲ್ ಮಾದಪ್ಪ ರವರಿಂದ ಮಾನ್ಯ ಪಿ ಚಿದಂಬರಂ ರವರು ಎಸ್ಟೇಟ್ ನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಪ್ರತಿವಾದಿಯ ತಾಯಿ ಕರ್ನಲ್ ಮಾದಪ್ಪ ರವರ ಮಕ್ಕಳಾದ ಮುತ್ತಣ ಹಾಗೂ ತಿಮ್ಮಯ್ಯರವರಿಂದ 34 ಎಕರೆ ಕಾಫೀ ಎಸ್ಟೇಟ್ ನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಮಂಡೆಪಂಡ ಉತ್ತಪ್ಪರವರು ನನ್ನ ತಂದೆಗೆ 40 ಸೆಂಟ್ ಜಾಗವನ್ನು ದಾನ ಮಾಡಿರುತ್ತಾರೆ ಎಂದರೆ ಸರಿ. 40 ಸೆಂಟ್ ಜಾಗ ಯಾವ ಕಾರಣಕ್ಕಾಗಿ ನನ್ನ ತಂದೆಗೆ ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆಯವರು ಹಲವಾರು ವರ್ಷಗಳಿಂದ ಕರ್ನಲ್ ಮಾದಪ್ಪ ರವರ ಗದ್ದೆಯಲ್ಲಿ ಕೆಲಸ ಮಾಡಿಕೊಂಡಿದ್ದ ಆ ಕಾರಣಕ್ಕಾಗಿ ಸದರಿ ಜಾಗವನ್ನು ದಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

3. ದಾನಪತ್ರ ಸೃಷ್ಟಿ ಮಾಡಿದ ದಾಖಲೆ ಎಂದು ಹೇಳಿ ನನ್ನ ವಿರುದ್ಧ ಸಬ್ ರಿಜಿಸ್ಟರ್ ಕಛೇರಿಯಲ್ಲಿ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಮಂಡೆಪಂಡ ಉತ್ತಪ್ಪರವರು ಹಚ್ಚಿನಾಡು ಗ್ರಾಮಕ್ಕೆ ಸೇರಿದವರು ಎಂದರೆ ಸರಿ. ನನ್ನ ಮನೆಯಿಂದ ಸದರಿಯವರ ಮನೆ 3 ಕಿ ಮೀ ಅಂತರದಲ್ಲಿದೆ ಎಂದರೆ ಸರಿ. ಮಂಡೆಪಂಡ ಉತ್ತಪ್ಪರವರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದು, ಸದರಿಯವರು ರಾಜಕೀಯವಾಗಿ ಗುರುತಿಸಿಕೊಂಡಿದ್ದರು ಎಂದರೆ ಸರಿ.

4. ವಿವಾದಿತ ರಸ್ತೆ ಯಾವ ಸರ್ವೆ ನಂಬರ್ ನಲ್ಲಿದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಸರ್ವೆ ನಂಬರ್ ನ ಜಮೀನಿಗೆ ಸಂಬಂಧ ಪಟ್ಟಂತೆ ದಾಖಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ದಾಖಲಿಸಿರುವ ಅಸಲು ದಾವಾ ಸಂಖ್ಯೆಃ17/2023 ಯಾವ ಸರ್ವೆ ನಂಬರ್ ಹಾಗೂ ಎಷ್ಟು ವಿಸ್ತೀರ್ಣ ದ ಜಮೀನಿಗೆ ಸಂಬಂಧ ಪಟ್ಟಂತೆ ದಾಖಲಿಸಲಾಗಿದೆ ಎಂದು ನನಗೆ ಗೊತ್ತಿಲ್ಲ. ವಿವಾದಿತ ರಸ್ತೆ ಸಮಾರು 3 ಕೀ.ಮೀ ಉದ್ದ ಹಾಗೂ 12 ರಿಂದ 20 ಅಡಿ ಅಗಲ ಇದೆ. ಸದರಿ ರಸ್ತೆಯ ವಿಚಾರ ಗ್ರಾಮ ನಕಾಶೆಯಲ್ಲಿ ನಮೂದಾಗಿಲ್ಲ. ವಿವಾದಿತ ರಸ್ತೆಯು ಹಚ್ಚಿನಾಡು ಮುಖ್ಯ ರಸ್ತೆಯಿಂದ ಶುರುವಾಗುತ್ತದೆ ಎಂದರೆ ಸರಿ. ಹಚ್ಚಿನಾಡು ಮುಖ್ಯ ರಸ್ತೆಯಲ್ಲಿ

ಹಗಲು ರಾತ್ರಿ ಅನೇಕ ವಾಹನಗಳು ಮತ್ತು ವ್ಯಕ್ತಿಗಳು ಓಡಾಡುತ್ತಿರುತ್ತಾರೆ ಎಂದರೆ ಸರಿ. ವಿವಾದಿತ ರಸ್ತೆಯ ಪ್ರಾರಂಭದಲ್ಲಿ ನನ್ನ ಮನೆಗೆ ಹೋಗಲು ದಾರಿ ಎಂದು ನಿಶಾನೆ ಬೋರ್ಡ ಹಾಕಿದ್ದೇನೆ ಎಂದರೆ ಸರಿ.

5. ಪ್ರತಿವಾದಿಗೆ ಸೇರಿದ ಕಾಫೀ ಎಸ್ಟೇಟ್ ವಿವಾದಿತ ರಸ್ತೆಯ ಎರಡು ಬದಿಗಳಲ್ಲೂ ಇದೆ ಎಂದರೆ ಸರಿ. ಪ್ರತಿವಾದಿಯು ತನ್ನ ಎಸ್ಟೇಟ್ ನಲ್ಲಿ ಕಾಫೀ, ಮೆಣಸು, ಅರೇಕಾ ಬೆಳೆ ಬೆಳೆಯುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿಯ ಮನೆ ವಿವಾದಿತ ರಸ್ತೆಯ ಮದ್ಯ ಭಾಗದಿಂದ 15 ಮೀಟರ್ ದೂರದಲ್ಲಿದೆ ಎಂದರೆ ಸರಿ. ಸದರಿ ರಸ್ತೆಯ ಪಕ್ಕದಲ್ಲೆ ಪ್ರತಿವಾದಿಗೆ ಸೇರಿದ ಕಣ ಇದೆ ಎಂದರೆ ಸರಿ. ಪ್ರತಿವಾದಿಗೆ ಸೇರಿದ ಜಮೀನನ್ನು ಅವರ ತಾಯಿ 1984 ರಲ್ಲಿ ಕರ್ಣಲ್ ಮಾದಪ್ಪ ರವರಿಂದ ಖರೀದಿಸಿರುವ ವಿಚಾರ ನನಗೆ ಗೊತ್ತು ಎಂದರೆ ಸರಿ. ಕರ್ಣಲ್ ಮಾದಪ್ಪರವರಿಗೆ ಸೇರಿದ ಲೈನ್ ಮನೆಯಲ್ಲಿ ನಾನು ಮತ್ತು ನನ್ನ ಮನೆಯವರು ವಾಸಿಸುತ್ತಿದ್ದೇವು ಎಂದರೆ ಸರಿ. ನಾನು ಹೇಳಿರುವ ದಾನ ಪತ್ರ ಆಗುವ ವರೆಗೂ ನಾನು ಮತ್ತು ನನ್ನ ಮನೆಯವರು ಸದರಿ ಲೈನ್ ಮನೆಯಲ್ಲಿ ವಾಸಿಸುತ್ತಿದ್ದೆವು ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಮತ್ತು ಇತರೇ ಕಾರ್ಮಿಕರು ವಿವಾದಿತ ರಸ್ತೆಯನ್ನೇ ಉಪಯೋಗಿಸುತ್ತಿದ್ದೆವು ಎಂದರೆ ಸರಿ. ವಿವಾದಿತ ರಸ್ತೆಯನ್ನು ನನ್ನನ್ನು ಹೊರತು ಪಡಿಸಿ ಗೀರೀಶ್ ಉತ್ತಪ್ಪ ಮತ್ತು ಕೊಳವಂಡ ದೇವಯ್ಯ ಸುಬ್ಬಯ್ಯ ರವರು ಉಪಯೋಗಿಸುತ್ತಿದ್ದಾರೆ.

6. ಸುಬ್ಬಯ್ಯರವರು ತಮ್ಮ ಗದ್ದೆಗೆ ಹೋಗಲು ವಿವಾದಿತ ರಸ್ತೆಯನ್ನು ಉಪಯೋಗಿಸುತ್ತಿದ್ದಾರೆ. ಸುಬ್ಬಯ್ಯ ರವರ ಗದ್ದೆಯ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಫೋಟೊದಲ್ಲಿ ಸದರಿ ಸುಬ್ಬಯ್ಯರವರು ತನ್ನ ಮನೆಗೆ ಹೋಗುವ ರಸ್ತೆ ಎಂದು ಬೋರ್ಡ ಹಾಕಿರುವುದು ಕಾಣುತ್ತಿದೆ ಎಂದರೆ ಸರಿ. ಸದರಿ ಫೋಟೊವನ್ನು ನಿಡಿ-1 ಎಂದು ಗುರುತಿಸಲಾಯಿತು. ವಿವಾದಿತ ರಸ್ತೆಯು ಹಚ್ಚಿನಾಡು ಮುಖ್ಯ ರಸ್ತೆಗೆ ಕೂಡುವ ಸ್ಥಳದಲ್ಲಿ ಪ್ರತಿವಾದಿಯು ಗೇಟ್ ಅಳವಡಿಸಿದ್ದರು ಎಂದರೆ ಸರಿಯಲ್ಲ. ದಿಃ 13.01.2023 ರಂದು ಸದರಿ ಗೇಟ್ ಕಳ್ಳತನ ವಾಗಿರುವ ವಿಚಾರವನ್ನು ನಾನೇ ಪ್ರತಿವಾದಿಗೆ ಫೋನ್ ಮುಲಕ ತಿಳಿಸಿದ್ದೇನೆ ಎಂದರೆ ಸರಿ. ದಿಃ 23.01.2023 ರಿಂದ ಮೂರು ದಿನಗಳ ಕಾಲ ನನ್ನ ಹೊಸ ಮನೆ ಹಾಗೂ ದೇವಸ್ಥಾನಗಳ ಪೂಜೆ ಕಾರ್ಯ ನಡೆದಿದೆ ಎಂದರೆ ಸರಿ. ಆ ಸಮಯಕ್ಕೆ ಪ್ರತಿವಾದಿಯು ವಿವಾದಿತ ರಸ್ತೆಯ ಪ್ರಾರಂಭದಲ್ಲಿ ಅಳವಡಿಸಿದ್ದ ಹೊಸ ಗೇಟ್ ನ್ನು ನನ್ನ ದೂರಿನ ಆಧಾರದ ಮೇಲೆ ಮಡಿಕೇರಿಯ Dy.SP ಮತ್ತು ಸಿದ್ದಾಪುರ ಪೊಲೀಸ್ ಠಾಣೆಯ PSI ರವರು ತೆರವು ಗೊಳಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯು ಮೂರನೇ ಬಾರಿಗೆ ಅಳವಡಿಸಿದ್ದ ಗೇಟ್ ನ್ನು ನಾನು ಮತ್ತು ಇತರರು ಕಿತ್ತು ಹಾಕಿದ್ದೇವೇ ಎಂದು ಪ್ರಕರಣದ ದಾಖಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆದರೆ ಗೇಟ್ ನ್ನು ನಾವು ಕಿತ್ತು ಹಾಕಿಲ್ಲ ಎಂದು ನುಡಿಯುತ್ತಾರೆ.

7. ವಿವಾದಿತ ರಸ್ತೆಯನ್ನು ಎರಡು ಬಾರಿ ಸರ್ವೆ ಮಾಡಿಸಲಾಗಿದೆ ಎಂದರೆ ಸರಿ. ವಿವಾದಿತ ರಸ್ತೆಗೆ ಸಂಬಂಧ ಪಟ್ಟಂತೆ ಪ್ರತಿವಾದಿಯು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್

ಅರ್ಜಿ ನಂ.10028/2023 ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ರಸ್ತೆಗೆ ಸಂಬಂಧ ಪಟ್ಟಂತೆ ರಕ್ಷಣೆ ನೀಡುವಂತೆ ಆದೇಶವಾಗಿದೆ ಎಂದರೆ ಸರಿ. ಸದರಿ ರಿಟ್ ಪ್ರಕರಣದಲ್ಲಿ ನಾನು 10ನೇ ಎದುರುದಾರ ಎಂದರೇ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ವಕಾಲತ್ ನ್ನು ಸಲ್ಲಿಸಿ ನಂತರ ನ್ಯಾಯಾಲಯಕ್ಕೆ ಹೋಗಿಲ್ಲ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಆದೇಶ ವಾದ ನಂತರ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಈ ದಾವೆಯಲ್ಲಿ ಅಸಲು ದಾವೆ ಸಂಖ್ಯೆ 17/2023 ಮತ್ತು ರಿಟ್ ಪ್ರಕರಣದ ಬಗ್ಗೆ ಮಾಹಿತಿ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ತಾತ್ಕಾಲಿಕ ನಿರ್ಬಂದಕಾಜ್ಞೆ ಆದೇಶ ಇದೆ ಎಂದರೆ ಸರಿ. ಸದರಿ ಆದೇಶವನ್ನು ಪ್ರತಿವಾದಿಯು ಉಲ್ಲಂಘಿಸಿದ್ದಾರೆ ಎಂದು ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ.

8. ಮಾನ್ಯ ಉಚ್ಚ ನ್ಯಾಯಾಲಯದಿಂದ ಆದೇಶ ಬಂದ ನಂತರ ನಾನು ಪ್ರೆಸ್ ಮೀಟ್ ಕರೆದು 'ಸಾರ್ವಜನಿಕ ರಸ್ತೆಗೆ ಮಹಿಳೆ ಅಡ್ಡಲಾಗಿ ಬೇಲಿ ಹಾಕಿದ್ದಾಳೆ' ಎಂದು ಹೇಳಿಕೆ ನೀಡದ್ದೇನೆ ಎಂದರೆ ಸರಿ. 1993-94 ರಲ್ಲಿ ನಾನು, ಮಂಡೆಪಂಡ ಉತ್ತಪ್ಪ, ಕುಲುವಂಡ ಜುಗುಲ್ ದೇವಯ್ಯ ರವರು ಸೇರಿ ಪಂಚಾಯಿತಿಗೆ ಮನವಿ ಕೊಟ್ಟು ರಸ್ತೆ ಮಾಡುವಂತೆ ಕೇಳಿದ್ದೆವು. ಉತ್ತಪ್ಪ ರವರು ಕುಲುವಂಡ ಮುತ್ತಣ್ಣ ರವರಿಂದ ಅದೇ ಸಮಯಕ್ಕೆ ಜಾಗ ಖರೀದಿಸಿದ್ದಿರಬಹುದು. ಉತ್ತಪ್ಪರವರಿಗೆ ಮೂರು ಜಮೀನುಗಳು ಇದ್ದು, ಎರಡು ಜಮೀನುಗಳ ಸರ್ವೆ ನಂಬರ್ 14 ಮತ್ತು 15 ಆಗಿದ್ದು, ಮತ್ತೊಂದು ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಉತ್ತಪ್ಪರವರು ಖರೀದಿಸಿರುವ ಜಮೀನಿನ ಒಟ್ಟು ವಿಸ್ತೀರ್ಣ 20 ಎಕರೆಗೂ ಹೆಚ್ಚು ಇರಬಹುದು. 1 ಕಿ.ಮೀ ಉದ್ದದ ರಸ್ತೆಯನ್ನು 18 ವರ್ಷಗಳ ಕಾಲ ನಿರ್ಮಾಣ ಮಾಡುವ ಅಗತ್ಯ ಇಲ್ಲ ಎಂದರೆ ಸರಿ. ವಿವಾದಿತ ರಸ್ತೆಯ ಪಕ್ಕದಲ್ಲಿ ಮತ್ತೊಂದು ರಸ್ತೆ ಇದೆ ಎಂದರೆ ಸರಿ. ಆ ರಸ್ತೆಯ ವಿಚಾರವನ್ನು ಗ್ರಾಮ ನಕಾಶೆಯಲ್ಲಿ ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಆ ರಸ್ತೆಗೆ ಕಲ್ಲು ಹಾಕಿದ್ದು, ಇನ್ನು ಡಾಂಬರಿಕರಣ ಆಗಿಲ್ಲ.

9. ನನ್ನ ಮನೆ ಇರುವ 40 ಸೆಂಟ್ ಜಾಗ ಕಂದಾಯ ಜಾಗ ಎಂದರೆ ಸರಿ. ಆ ಜಾಗ ಕುಲುವಂಡ ಕುಟುಂಬದ ಜಮ್ಮಾ ಆಸ್ತಿ ಎಂದರೆ ಸರಿ. ಆ ರಸ್ತೆಯನ್ನು ಮಂಡೆಪಂಡ ಉತ್ತಪ್ಪರವರು ನನ್ನ ತಂದೆಗೆ ದಾನ ಕೊಟ್ಟಿದ್ದಾರೆ ಎಂದರೆ ಸರಿ. ಈಗಲೂ ಸಹ ಕುಲುವಂಡ ಕುಟುಂಬಸ್ಥರು ಇದ್ದಾರೆ ಎಂದರೆ ಸರಿ. ಕುಲುವಂಡ ಕುಟುಂಬಸ್ಥರು ನನ್ನ ತಂದೆಯ ಹೆಸರಿಗಿರುವ ದಾನ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಸದರಿ 40 ಸೆಂಟ್ ಜಾಗಕ್ಕೆ ಉತ್ತಪ್ಪ ರವರ ಹೆಸರಿಗೆ ಕ್ರಯ ಪತ್ರ ಇರಬಹುದು. ಸರ್ವೆ ನಂ.17/1 ರ 45 ಸೆಂಟ್ ಜಾಗ ಅಚಲ್ ಅಚ್ಚಯ್ಯ ರವರ ಹೆಸರಿಗೆ ಇದೆ ಎಂದರೆ ಸರಿ. ಸರ್ವೆ ನಂ.17/3 ರ 44 ಸೆಂಟ್ ಜಾಗ ಕುಲುವಂಡ ಕುಟುಂಬಸ್ಥರ ಹೆಸರಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.17/1 ರ 40 ಸೆಂಟ್ ಜಾಗ ಸುಶಿ ರವರ ಹೆಸರಿಗೆ ಇದೆ ಎಂದರೆ ಸರಿಯಲ್ಲ. ನನ್ನ ಜಾಗದ ಕಂದಾಯ ದಾಖಲೆಗಳನ್ನು ನನ್ನ ಹೆಸರಿಗೆ ಪಡೆದುಕೊಳ್ಳುವಾಗ ನಮ್ಮ ವಂಶ ವೃಕ್ಷದ ಪಟ್ಟಿ ಮತ್ತು ಕುಟುಂಬ ಸದಸ್ಯರ ಪಟ್ಟಿಯನ್ನು ಹಾಜರುಪಡಿಸಲಾಗಿದೆಯಾ ಎಂದು ನನಗೆ ನೆನಪಿಲ್ಲ. ನನಗೆ ಒಬ್ಬ ಸಹೋದರಿ ಇದ್ದಾರೆ ಎಂದರೆ ಸರಿ.

10. ನಾನು ದೇವಸ್ಥಾನ ಕಟ್ಟಲು ಪಂಚಾಯಿತಿಯಿಂದ ಅನುಮತಿ ಪಡೆದಿಲ್ಲ. ಸಾಕ್ಷಿಯು ಮುಂದುವರಿದು ಮನೆಯಲ್ಲಿಯೇ ದೇವಸ್ಥಾನ ಕಟ್ಟುವುದರಿಂದ ಅನುಮತಿ ಬೇಡ ಎಂದು ನುಡಿದಿದ್ದಾರೆ. ನಾನು ನನ್ನ ಜಾಗಕ್ಕೆ ಸಂಬಂಧ ಪಟ್ಟಂತೆ ಗ್ರಾಮ ಪಂಚಾಯಿತಿ ಮತ್ತು ಕಂದಾಯ ಇಲಾಖೆಯಲ್ಲಿ ಕಂದಾಯ ಪಾವತಿಸುತ್ತಿದ್ದೇನೆ. ಜಿಲ್ಲಾ ನೊಂದಣಾಧೀಕಾರಿಗಳ ವಿಚಾರಣೆಯಲ್ಲಿ ಉತ್ತಪ್ಪ ರವರ ಮಗ ಗಿರೀಶ್ ರವರು ಹಾಜರಾಗಿ ಉತ್ತಪ್ಪರವರು ನನ್ನ ತಂದೆಗೆ ದಾನ ಪತ್ರ ಬರೆದು ಕೊಟ್ಟಿರುವ ವಿಚಾರ ಗೊತ್ತಿಲ್ಲ ಎಂದು ನುಡಿದಿರುತ್ತಾರೆ ಎಂದರೆ ಸರಿ. ಈಗ ನೋಡುತ್ತಿರುವ ದಾಖಲೆ ಸದರಿ ವಿಚಾರವಾಗಿ ಜಿಲ್ಲಾ ನೊಂದಾಣಾಧೀಕಾರಿಗಳು ಮಾಡಿರುವ ಆದೇಶ ಎಂದರೆ ಇರಬಹುದು. ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ವಿವಾದಿತ ರಸ್ತೆ ಪ್ರತಿವಾದಿಯ ಖಾಸಗಿ ರಸ್ತೆ ಆಗಿದ್ದು, ಅದರ ಮೇಲೆ ಸಾರ್ವಜನಿಕರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶವಿದ್ದರೂ ಸಹ ನಾನು ಅದನ್ನು ಉಲ್ಲಂಘನೆ ಮಾಡುತ್ತಿದ್ದೆನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪಹಣಿ ಮತ್ತು ಸುಳ್ಳು ದಾನ ಪತ್ರವನ್ನು ಸೃಷ್ಟಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಖಾಸಗಿ ರಸ್ತೆಯನ್ನು ನಾನು ಒತ್ತಾಯ ಪೂರ್ವಕವಾಗಿ ಬಳಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಅಪರ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ವಿರಾಜಪೇಟೆ.